# ಸೋನಾಕ್ಷಿಗೆ ಕಲ್ಯಾಣವಂತೆ!

ಆಗಾಗ್ಗೆ ಬೇರೆ ಬೇರೆ ಗೆಳೆಯರ ಜತೆ ಕಾಣಿಸಿಕೊಂಡು ಪಡ್ಡೆ ಹುಡುಗರ ಕನಸಿಗೆ ತಣ್ಣೀರು ಸುರಿಯುತ್ತಿದ್ದ ಸೋನಾಕ್ಷಿ ಸಿನ್ಹಾ, ಕೊನೆಗೂ ಜಂಟಿಯಾಗುವ ಕಾಲ ಬಂದಿರುವ ಸೂಚನೆ ಕಾಣಿಸಿದೆ. ಸೋನಾಕ್ಷಿ ಜತೆ ಹಾಗೆ ಹಲವು ಪಾರ್ಟಿಗಳಲ್ಲಿ ಕಾಣಿಸಿಕೊಂಡಿರುವ ಬಂಟಿ ಸಜ್ದೆ ಆಕೆಯ ಗೆಣೆಕಾರ ಎನ್ನುವ ಸುದ್ದಿ ಬಿಟೌನ್‌ನಲ್ಲಿ ಹರಿದಾಡುತ್ತಿದೆ. ಈ ಮಾತು ಕೇಳಿಬರುತ್ತಿರುವುದು ಇದೇ ಮೊದಲೇನಲ್ಲ. ಆದರೆ, ಇದು ಬಹುತೇಕ ಅಧಿಕೃತವಾಗಿದೆ. ಬಲ್ಲ ಮೂಲಗಳ ಪ್ರಕಾರ ಸೋನಾಕ್ಷಿ ಮತ್ತು ಬಂಟಿ ಇಬ್ಬರೂ ಫೆಬ್ರುವರಿಯಲ್ಲಿ ನಿಶ್ಚಿತಾರ್ಥ ಮಾಡಿಕೊಳ್ಳಲಿದ್ದಾರೆ. ಬಂಟಿ ಎದುರಿಟ್ಟ ಮದುವೆಯ ಪ್ರಸ್ತಾಪಕ್ಕೆ ಒಲ್ಲೆ ಎನ್ನದೆ ಸೋನಾಕ್ಷಿ ಈಗಲೇ ತಯಾರಿ ನಡೆಸುತ್ತಿದ್ದಾಳಂತೆ. ಈ ಕಾರಣಕ್ಕಾಗಿಯೇ ಸೋನಾಕ್ಷಿ ಯಾವುದೇ ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಿಲ್ಲ. ಸೋನಾಕ್ಷಿ–ಬಂಟಿಯ ಪ್ರೀತಿಗೆ ಮನೆಯಿಂದ ಅಧಿಕೃತ ಒಪ್ಪಿಗೆ ಸಿಕ್ಕಿಲ್ಲ ಎಂದೂ ಹೇಳಲಾಗುತ್ತಿದೆ. ಅದರಲ್ಲಿಯೂ ಸೋನಾಕ್ಷಿಯ ಅಮ್ಮ ಪೂನಂ ಸಿನ್ಹಾ ಈ ಸಂಬಂಧವನ್ನು ಸುತಾರಾಂ ಒಪ್ಪಿಕೊಳ್ಳುತ್ತಿಲ್ಲ.

ಸದ್ಯ, ಸೋನಾಕ್ಷಿ 'ನೂರ್' ಮತ್ತು 'ಇಟ್ಟೆಫಾಕ್' ಚಿತ್ರಗಳಲ್ಲಿ ನಟಿಸುತ್ತಿದ್ದಾಳೆ. ಆಕೆಯ ನಿಶ್ಚಿತಾರ್ಥ ಮತ್ತು ಮದುವೆಯ ಓಡಾಟಗಳಿಂದ ಸಿನಿಮಾಕ್ಕೆ ತೊಂದರೆ ಆಗಲಿದೆಯೇ ಎಂಬ ಆತಂಕ ಚಿತ್ರತಂಡಗಳದ್ದು. ಸೋನಾಕ್ಷಿ ಅಥವಾ ಬಂಟಿ ಮಾತ್ರ ಇದುವರೆಗೂ ಈ ಬಗ್ಗೆ ತುಟಿ ಬಿಚ್ಚಿಲ್ಲ.





# ಮನರಂಜನೆ ಎಂಬ ಹಳೆ ಮಂತ್ರ

ನೈಜ ಘಟನೆಗಳನ್ನು ಆಧರಿಸಿದ ಮತ್ತು ಕ್ರೌರ್ಯದ ಸಿನಿಮಾಗಳ ಮೂಲಕ ಬೆಚ್ಚಿಬೀಳಿಸಿದ ನಿರ್ದೇಶಕ ರಾಮ್ ಗೋಪಾಲ್ ವರ್ಮಾ, ಇತ್ತೀಚಿನ ದಿನಗಳಲ್ಲಿ ಹೆಚ್ಚು ಸುದ್ದಿಯಾಗುತ್ತಿರುವುದು ತಮ್ಮ ಟ್ವೀಟ್‌ಗಳ ಮೂಲಕ. ರಾಜಕೀಯ, ಸಿನಿಮಾ, ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳ ಕುರಿತು ವರ್ಮಾ ಮಾಡುವ ಟ್ವೀಟ್‌ಗಳು ವಿವಾದ ಹುಟ್ಟಿಸುತ್ತಲೇ ಇರುತ್ತವೆ. ವಿವಾದಪ್ರಿಯ ವರ್ಮಾಗೆ ಅವು ವಿಶೇಷವೂ ಅಲ್ಲ. 'ತಮ್ಮದು ಅಪ್ಪಟ ಮನರಂಜನೆಯ ಚಿತ್ರ ಎಂದು ಹೇಳಿಕೊಳ್ಳುವುದು ಸರಿಯಲ್ಲ. ನಿರ್ದೇಶಕನ ಪ್ರಾಥಮಿಕ ಕರ್ತವ್ಯ ಪ್ರೇಕ್ಷಕರನ್ನು ರಂಜಿಸುವುದು. ಆದರೆ ಮನರಂಜನೆ ಎಂಬುದರ ಕಾನ್ಸೆಪ್ಟ್ ಈಗ ಹಳತು. ಹೀಗಾಗಿ ತನಗೆ ಅದರಲ್ಲಿ ನಂಬಿಕೆ ಇಲ್ಲ' ಎಂದಿದ್ದಾನೆ. ವರ್ಮಾ ಒಂದು ಟ್ವೀಟ್ ಸಹ ಜನರಿಗೆ ಮನರಂಜನೆ ನೀಡಬಲ್ಲದು. ಕಥೆಯೊಂದಕ್ಕೆ ಹೊಳೆಯುವ ತಿರುಳು, ಇಡೀ ಸಿನಿಮಾಕ್ಕಿಂತಲೂ ಕೆಲವೊಮ್ಮೆ ರಂಜನೀಯವಾಗಿರುತ್ತದೆ ಎನ್ನುವುದು ಆತನ ಅಭಿಪ್ರಾಯ.

ಇತ್ತೀಚೆಗಷ್ಟೇ ತೆಲುಗಿನಲ್ಲಿ 'ವಂಗವೀಟಿ' ಎಂಬ ಅಪರಾಧ ಆಧಾರಿತ ಸಿನಿಮಾ ಮಾಡಿರುವ ವರ್ಮಾ, 'ಶಶಿಕಲಾ' ಎಂಬ ಸಿನಿಮಾ ಮಾಡುವ ಘೋಷಣೆಯನ್ನೂ ಮಾಡಿದ್ದಾನೆ. ಇದು ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರ ಆಪ್ತೆ ಶಶಿಕಲಾ ಅವರ ಬದುಕಿನ ಕುರಿತಾದದ್ದು ಎನ್ನುವ ಸುಳಿವನ್ನೂ ನೀಡಿದ್ದಾನೆ. ಟ್ವೀಟ್ ಸಹ ಮನರಂಜನೆ ನೀಡಬಲ್ಲದು ಎಂಬ ತನ್ನ ಅಭಿಪ್ರಾಯವನ್ನು ಸಾಬೀತುಪಡಿಸುವ ಸಲುವಾಗಿಯೇ ಆತ ಸಿನಿಮಾಗಳಿಗಿಂತ ಟ್ವೀಟ್ ಮೂಲಕವೇ ಸುದ್ದಿಯಾಗುತ್ತಿದ್ದಾನೆ, ಅಷ್ಟೇ ಮನರಂಜನೆಯನ್ನೂ ನೀಡುತ್ತಿದ್ದಾನೆ ಎನ್ನುವುದು ಆತನ 'ಹಿಂಬಾಲಕರ' ಕುಹಕ.

■ ಅಮಿ